International Journal of Kannada Research
www.kannadajournal.com

**ISSN: 2454–5813**
IJKR 2020; 6(4): 91-94
© 2020 IJKR
www.kannadajournal.com
Received: 08-08-2020
Accepted: 13-09-2020

**ಸುಶೀಲಾದೇವಿ ಬಿ ಬೇಟಗೇರಿ**
ಕನ್ನಡ ಉಪನ್ಯಾಸಕರು,
ಕೆ.ಎಲ್.ಇ.ಸಂಸ್ಥೆಯ ಜಗದ್ಗುರು
ಗಂಗಾಧರ ವಾಣಿಜ್ಯ
ಮಹಾವಿದ್ಯಾಲಯ. ಹುಬ್ಬಳ್ಳಿ
**ಕರ್ನಾಟಕ, ಭಾರತ**

**Corresponding Author:**
**ಸುಶೀಲಾದೇವಿ ಬಿ ಬೇಟಗೇರಿ**
ಕನ್ನಡ ಉಪನ್ಯಾಸಕರು,
ಕೆ.ಎಲ್.ಇ.ಸಂಸ್ಥೆಯ ಜಗದ್ಗುರು
ಗಂಗಾಧರ ವಾಣಿಜ್ಯ
ಮಹಾವಿದ್ಯಾಲಯ. ಹುಬ್ಬಳ್ಳಿ
**ಕರ್ನಾಟಕ, ಭಾರತ**

# ಜನಪದ ಸಾಹಿತ್ಯ: ಲಾವಣಿಗಳಲ್ಲಿ ಸ್ವಾತಂತ್ರ್ಯದ ಧ್ವನಿ

**ಸುಶೀಲಾದೇವಿ ಬಿ ಬೇಟಗೇರಿ**

ಬಂದ ಜನಾ ಕೇಳಿರಿ ಇಂದು ನಾನು ಹೇಳತೇನಿ
ಚಂದದಿ ಸ್ವಾತಂತ್ರ್ಯ ಹೋರಾಟಗಾರರ ಕಥೆಯನ್ನು
ಚೆನ್ನಮ್ಮನ ಕಾಳಗವನ್ನು ಸಿಂಧೂರ ಲಕ್ಷ್ಮಣನ ಯುದ್ಧವನ್ನು
ಸ್ವಾತಂತ್ರ್ಯಕ್ಕೆ ನೀಡಿದ ಕೊಡುಗೆಯನ್ನು
ಚಿತ್ತವಿಟ್ಟು ಕೇಳಿರಪ್ಪ/ಕೇಳಿರವ್ವ ಸಂಪೂರ್ಣ........

"ಸ್ವಾತಂತ್ರ್ಯ ನಮ್ಮ ಜನ್ಮಸಿದ್ದು ಹಕ್ಕು"ಎಂಬ ಬಾಲಗಂಗಾಧರ ತಿಲಕರ ಮಾತಿನಂತೆ ಸ್ವತಂತ್ರ್ಯ ಪಡೆದುಕೊಳ್ಳುವುದು ಅಷ್ಟೇ ನಮ್ಮ ಕರ್ತವ್ಯವಾಗಿದೆ.ಈ ಸ್ವಾತಂತ್ರ್ಯವನ್ನು ಸಂಗ್ರಾಮದ ಮೂಲಕ ಪಡೆದುಕೊಳ್ಳುದು ಆಗಿದೆ.ಏಕೆಂದರೆ ನಮ್ಮ ಭಾರತ ದೇಶವನ್ನು ಬ್ರಿಟಿಷರು ಆಳುತ್ತಿರುವುದರಿಂದ ಹೋರಾಟ ಅನಿವಾರ್ಯವಾಯಿತು.ಸಂಗ್ರಾಮವೆಂದರೆ ಯುದ್ಧ, ಕಾಳಗ ಎಂದರ್ಥ.ಕನ್ನಡ ಸಾಹಿತ್ಯದಲ್ಲಿ ಬರುವಂತ ಒಂದು ವಿಧ ಜನಪದ ಸಾಹಿತ್ಯ.ಈ ಸಾಹಿತ್ಯದಲ್ಲಿ ಬರುವಂತ ಒಂದು ವಿಧ ಲಾವಣಿಗಳು.ಈ ಲಾವಣಿಗಳು ಸಿಂಧೂರ ಲಕ್ಷ್ಮಣ ಮತ್ತು ಚನ್ನಮ್ಮ ರಾಣಿಯ ಕಾಳಗ ಇವುಗಳಲ್ಲಿ ಸ್ವಾತಂತ್ರ್ಯದ ಧ್ವನಿ ಹೇಗಿದೆಯೆಂಬುದನ್ನು ನೋಡೋಣ. ಇಬ್ಬರೂ ಉತ್ತರ ಕರ್ನಾಟಕದ ಹೆಬ್ಬುಲಿಗಳು.ಸ್ವಾತಂತ್ರ್ಯ ಹೋರಾಟದಲ್ಲಿ ರಕ್ತ ತಪರಣ ಮಾಡಿ,ಆತ್ಮಾರ್ಪಣೆ ಮಾಡಿ ಭಾರತ ಮಾತೆಯ ಪುಣ್ಯ ಭೂಮಿಗೆ ಸ್ವತಂತ್ರ್ಯ ತಂದು ಕೊಟ್ಟಿದ್ದು ನಮ್ಮೆಲ್ಲರಿಗೂ ಸ್ಮರಣೀಯರು.ಇನ್ನೊಂದು ಬಾಗಲಕೋಟ ಜಿಲ್ಲೆಯ ಸಿಂಧೂರ ಲಕ್ಷ್ಮಣ ಇವರಿಬ್ಬರು ನಮ್ಮೆರಡು ಕೆಂಗಣ್ಣದ ಹೆಬ್ಬುಲಿಗಳು.ಎಲ್ಲ ಅರ್ಥದಲ್ಲಿ ಬದುಕಿಗಾಗಿ ಬರೆದವರು,ಬರದೇ ಬದುಕಿದವರು.ಜನಪದರು."ಭಾವನೆಗಳೇ ಬರಹ,ಬರಹವೇ ಭಾವನೆಗಳ ಸಂಗಮ" ಜನಪದರು ಬದುಕಿನ ವಿಸ್ತಾರವಾದ ಅನುಭವ ದ್ರವ್ಯವನ್ನು ಸುಲಭವಾಗಿ ತಮ್ಮ ಹಾಡುಗಳಲ್ಲಿ ಹಿಡಿದಿಟ್ಟವರು.ಸಮರ್ಥ ಮತ್ತು ಸಾಧನೆಗಳ ಸ್ಪಷ್ಟ ಹಾಗೂ ಖಚಿತವಾದ ಚಿತ್ರ ಸಿಗಲು ಸಾಧ್ಯ ಜನಪದರ ಭಾವನೆಗಳು ಸಿದ್ಧಾಂತ ಮಾತ್ರ ಆಗಲಿಲ್ಲ ಅದು ಸಾಹಿತ್ಯದಲ್ಲಿ ಬರುವ ಸಾಹಾನುಭೂತಿಯೂ ಆಗಲಿಲ್ಲ ಇವೆರಡನ್ನೂ ಮೀರಿದ ಸ್ವಾತಂತ್ರ್ಯದ ಬದುಕನ್ನು ಮೇಲಕ್ಕೆತ್ತುವ ಕ್ರಿಯಾತ್ಮಕ ಕಾಳಜಿಯನ್ನು ಇಟ್ಟುಕೊಂಡ ಕಾರಣಕ್ಕಾಗಿಯೇ ಜನಪದ ಸಾಹಿತ್ಯವು ಇಂದಿಗೂ ಪ್ರಾಂತೀಯ ಕಿಡಿಯಾಯಿತು."ಅರಿತಷ್ಟು ಮತ್ತು ಆಧರಿಸಿದಷ್ಟು"ಇವರ ಮೌಲ್ಯಗಳು ನಮಗೂ ಮಾದರಿಯಾಗಿವೆ.ಭಾರತಮಾತೆಯು ಸ್ವತಂತ್ರ್ಯ ಭೂಮಿಯನ್ನು ಪಡೆಯಬೇಕಾದರೆ ಭಾರತದ ಮಣ್ಣಲ್ಲಿ ಹುಟ್ಟಿ ಬೆಳೆದ ಮಹಿಳೆಯರದೇ ಮುಕ್ಕಾಲು ಪಾಲು ಇದೆ.ಸ್ವಲ್ಪ ತಪ್ಪಾದೀತು.ತುಂಬಾ ಇದೆ ಹೇಳವುದು ಒಳಿತು.ಕಣ್ಣ ಮುಂದೆ ಸುಳಿಯುವ ಮಹಾನ್ ಚೇತನಗಳು.ಕಿತ್ತೂರು ಚೆನ್ನಮ್ಮ,ಉಳ್ಳಾಲದ ರಾಣಿ ಅಬ್ಬಕ್ಕದೇವಿ,ಝಾನ್ಸಿರಾಣಿ ಲಕ್ಷ್ಮೀಬಾಯಿ,ನೀವೆದಿತಾ ಕಸ್ತೂರಿ ಬಾ ಗಾಂಧಿ ಮುಂತಾದವರು.ಅದಕ್ಕೆ ಭಾರತ ದೇಶವನ್ನು ಮೇರಾ ಭಾರತ ಮಹಾನ್‌ಯೆಂದು ಕರೆಯುವರು.ಬ್ರಿಟಿಷರ ಜೊತೆ ಹೋರಾಟ ಮಾಡುತ್ತಾ,ಮಾಡುತ್ತಾ ಪ್ರಾಣ ಬಿಡುವ ಸಂದರ್ಭದಲ್ಲಿ ಕೇಳುತ್ತಾಳೆ.ನಾನು ಪ್ರಾಣ ಬಿಡುವ ಸಮಯಕ್ಕಿಂತ ನನ್ನನ್ನು ಭಾರತದ ಪುಣ್ಯ ನೆಲದಲ್ಲಿ ಇಡಿ.ಅಂದರೆ ಇನ್ನೂ ಬ್ರಿಟಿಷರ ವಶವಾಗದೇ ಇರುವ ನೆಲದಲ್ಲಿ ಹಾಕಿ ಆ ಹೆಣ್ಣು ಮಗಳು ಹೋರಾಡುತ್ತಾ ಸ್ವತಂತ್ರ್ಯ ಭಾರತ ಕಲ್ಪನೆ ಎಷ್ಟೆಯೆಂಬುದು ತೋರುತ್ತದೆ.ಹಾಗಾಗಿ ಭಾರತ ನೆಲದಲ್ಲಿ ಪ್ರಾಣ ಬಿಡುತ್ತಾಳೆ. ಝಾನ್ಸಿರಾಣಿ ಲಕ್ಷ್ಮೀಬಾಯಿ ಸ್ವತಂತ್ರ್ಯಕ್ಕಾಗಿ ತನ್ನ ಗಂಡನನ್ನು ಕಳೆದುಕೊಂಡು ಕೊನೆಗೆ ಬೆನ್ನಿಗೆ ಕಟ್ಟಿಕೊಂಡು ಹೋರಾಟ ಮಾಡುತ್ತಾ ಈ ನೆಲಕ್ಕಾಗಿ ಪ್ರಾಣಬಿಟ್ಟಿರುವುದು ಸಾಮಾನ್ಯವಾದ ಸಂಗತಿಯನ್ನು ಸಹೋದರಿ ನೀವೇದಿತಾರವರು ಸ್ವತಂತ್ರ್ಯ ಭಾರತ ಹೋರಾಟಕ್ಕಾಗಿ ಸಾಕಷ್ಟು ದುಡಿದರು.ಸರ್ ಸುಭಾಸ್ ಚಂದ್ರ ಬೋಸ್‌ರವರು "ಅಜಾದ್ ಹಿಂದ ಫೌಜ್"ಎಂಬ ಸೈನ್ಯವನ್ನು ಕಟ್ಟಿದಾಗ ಮಹಿಳೆಯರ

ಪಡೆಯೊಂದು ಬೋಸ್‌ರಿಗೆ ರಕ್ತ ತಿಲಕ ಇಟ್ಟು ತಮ್ಮ ಸ್ವಾತಂತ್ರ್ಯಕ್ಕಾಗಿ ಸಮರ್ಪಣೆ ಮಾಡಿಕೊಂಡ ಚಿತ್ರಣವು ಸಾಹಿತ್ಯದಲ್ಲಿ ನಮ್ಮೆಲ್ಲರಿಗೂ ಆದರ್ಶಪ್ರಾಯವಾಗಿದೆ.ಮತ್ತು ಕಸ್ತೂರಿ ಬಾ ಗಾಂಧಿಯವರು ಸ್ವಾತಂತ್ರ್ಯ ಭಾರತಕ್ಕೆ ಕೊಟ್ಟ ಇಡೀ ಹೋರಾಟದ ಚಿತ್ರಣವು ನಮಗೆ ಸಾಹಿತ್ಯದಲ್ಲಿ ಸಾಕಷ್ಟು ಕೊಡುಗೆಯಾಗಿ ನೀಡಿದೆ."ನಾವು ವೀರ ಭಾರತೀಯರು ರಣರಂಗದ ಕಲಿಗಳು ಯುದ್ಧ ಭೂಮಿಯಲ್ಲಿ ಬದ್ಧ ವೈರಿಗಳು ನಾವು"ಜನಪದ ಸಾಹಿತ್ಯ ಒಬ್ಬರ ಮಾತು ಅಥವಾ ಹಾಡಿನಲ್ಲಿ ಕಾಣಿಸಿಕೊಡಿರುವ ಅದು ಮೂಲತ: ಸಮೂಹ ಸೃಷ್ಠಿ,ಮೂಲದಲ್ಲಿದ್ದದು ಒಬ್ಬರಿಂದೊಬ್ಬರಿಗೆ ಆಕಾರ ಪಡೆಯುತ್ತಾ ಹೊಸತನ ಒಳಗೊಳ್ಳುತ್ತ ಎತ್ತಿಕೊಂಡವರ ಕೂಸಾಗುತ್ತದೆ.ಜನಪದರು ಭಾವುಕರು ಆಗಿರುವಂತೆ ಕಷ್ಟಗಳನ್ನು ಎದುರಿಸುವ ಸಹಿಸುವ ಸಾಹಸಿಗಳೂ ಹೌದು.ಇದಕ್ಕೆ ವೀರಗಲ್ಲುಗಳೇ ಸಾಕ್ಷಿ.ಸಮೂಹದ ಒಳಿತಿಗಾಗಿ,ನಂಬಿದವರ ಹಿತಕ್ಕಾಗಿ,ವೈರಿಗಳ ಹುಟ್ಟಡಗಿಸುವ ಸ್ವಾಭಿಮಾನಕ್ಕಾಗಿ ಪ್ರಾಣವನ್ನೇ ಪಣಕ್ಕೀಡುತ್ತಾರೆ.ಅಂಥ ಅಸಾಧಾರಣ ಗುಣವುಳ್ಳವರನ್ನು ಆದರ್ಶವಾಗಿಸಿಕೊಳ್ಳುತ್ತಾರೆ. ಅವರ ಮೇಲೆ ಕಥೆ ಕಾವ್ಯಗಳನ್ನು ಕಟ್ಟಿ ಅಮರರನ್ನಾಗಿಸುತ್ತಾರೆ.ಅಂತವರು ಮತ್ತೆ ಮತ್ತೆ ಹುಟ್ಟಿ ಬರಲೆಂದು ಹಾರೈಸುತ್ತಾರೆ. ಕಿತ್ತೂರು ಚನ್ನಮ್ಮ,ಬೆಳವಡಿ ಮಲ್ಲಮ್ಮ, ಒನಕೆ ಒಬವ್ವ,ಸಿಂಧೂರ ಲಕ್ಷಣ,ಸಂಗೊಳ್ಳಿ ರಾಯಣ್ಣ, ನರಗುಂದ ಬಾಬಾಸಾಹೇಬ, ಕುಮಾರರಾಮ, ಕೆಂಪೇಗೌಡ, ಮುಂತಾದ ಸೌಂಸ್ಕೃತಿಕ ವಿವರ ಕುರಿತಾದ ಕಥನಗೀತೆ, ಲಾವಣಿಗಳು ನಿದರ್ಶನಗಳಾಗಿವೆ.ಕಿತ್ತೂರ ಸಂಸ್ಥಾನ ಚನ್ನಮ್ಮ ಮತ್ತು ಚನ್ನಮ್ಮನ ಬಂಟ ಸಂಗೊಳ್ಳಿ ರಾಯಣ್ಣನ ಕುರಿತು ಸಾಹಿತ್ಯವಿದೆ.ಅಂಥ ಸಾಹಿತ್ಯವುಳ್ಳ ಕೃತಿಗಳಲ್ಲಿ ಡಾ.ಎಂ.ಎಂ.ಕಲಬುರ್ಗಿ,ಡಾ.ಚನ್ನಕ್ಕ ಪಾಪಟೆ,ಅವರು ಸಂಪಾದಿಸಿರುವ ಕಿತ್ತೂರ ಸಂಸ್ಥಾನ ಸಾಹಿತ್ಯ ಕೃತಿಯೂ ಒಂದಾಗಿದೆ.ಗದಗದ ಶ್ರೀ ಜಗದ್ಗುರು ತೋಂಟದಾರ್ಯ ಮಠದ ವೀರಶೈವ ಅಧ್ಯಯನ ಸಂಸ್ಥೆಯಿಂದ ಈ ಕೃತಿ ಪ್ರಕಟಗೊಂಡಿದೆ.ಪಸ್ತುತ ಚನ್ನಮ್ಮ ರಾಣಿಯ ಕೊನೆಯ ಕಾಳಗ ಈ ಮೇಲಿನ ಕೃತಿಯಿಂದ ಆಯ್ದುಕೊಳ್ಳಲಾಗಿದೆ.ವೈರಿ ಸೆರೆ ಸಿಕ್ಕರೂ ಸೇಡಿಗೆ ಮುಂದಾಗದೆ ಧರ್ಮ ಪಾಲಿಸುವ ಚನ್ನಮ್ಮ ತಮ್ಮವರಿಂದಲೇ ಸೋಲಬೇಕಾಗಿ ಬಂದ ದುರಂತ.ಈ ಕಥಾನಕದಲ್ಲಿದೆ.ಚನ್ನಮ್ಮ ರಾಣಿಯ ಕೊನೆಯ ಕಾಳಗದಲ್ಲಿ ಚನ್ನಮ್ಮ ರಾಣಿಯ ಶೌರ್ಯವನ್ನು ಕಂಡು ಕಂಪನಿ ಸರಕಾರವು ಅಚ್ಚರಿಗೊಂಡಿತು.

ಕಿತ್ತೂರು ರಾಣಿ ಚನ್ನಮ್ಮ (೧೭೭೮-೧೮೨೯) ಸ್ವಾತಂತ್ರ್ಯ ಸ್ವಾಭಿಮಾನಿಗಳ ಸಾಕಾರಮೂರ್ತಿ ಕಿತ್ತೂರಿನ ದೇಸಾಯಿಗಳಲ್ಲಿ ಪ್ರಸಿದ್ಧನಾದ ಮಲ್ಲಸರ್ಜನ ಕಿರಿಯ ಹೆಂಡತಿ.ತನ್ನ ಪುಟ್ಟ ರಾಜ್ಯದ ಸ್ವಾತಂತ್ರ್ಯ ರಕ್ಷಣೆಗಾಗಿ ಬ್ರಿಟಷರ ದೊಡ್ಡ ಸೈನ್ಯದ ವಿರುದ್ಧ ಸಟೆದು ನಿಂತು ನೆಡೆಸಿದ ಹೋರಾಟ.ಅಲ್ಲಿ ತೋರಿಸಿದ ಧೈರ್ಯ, ಸಾಹಸ, ಕೆಚ್ಚುಗಳು ಚನ್ನಮ್ಮನನ್ನು ಅಜರಾಮರವಾದ ಕೀರ್ತಿ ಶಿಖರಕ್ಕೇರಿಸಿವೆ.ಚನ್ನಮ್ಮಳಿಂದ ಕಿತ್ತೂರು ಪ್ರಸಿದ್ಧವಾಗಿದೆ.ಇವಳು ಬೆಳಗಾವಿ ಜಿಲ್ಲೆಯ ಕಾಕತೀ ಎಂಬ ಊರಿನಲ್ಲಿ ೧೪ ನವ್ಹಂಬರ ೧೭೭೮ರಂದು ಜನಿಸಿದಳು.೨ ಪೆಬ್ರುವರಿ೧೮೨೯ರಂದು ತನ್ನ ೫೦ನೇ ವಯಸ್ಸಿನಲ್ಲಿ ಬೈಲಹೊಂಗಲದಲ್ಲಿ ಮರಣಹೊಂದಿದಳು.ಇವಳು ಪ್ರಥಮ ಭಾರತದ ಸ್ವಾತಂತ್ರ್ಯ ಮೊದಲ ಹೋರಾಟಗಾರರ್ತಿಯಾಗಿದ್ದಳು.ಈಕೆಯ ಸ್ವತಂತ್ರ್ಯ ಹೋರಾಟಕ್ಕೆ ನೀಡಿದ ಕೊಡುಗೆಯೆಂದರೆ,ಕಿತ್ತೂರಿನ ಮೇಲೆ ಬ್ರಿಟಷರು ಮಾಡಬಹುದಾದ ಆಕ್ರಮಣವನ್ನು ತಪ್ಪಿಸಲು ಚನ್ನಮ್ಮ ಥ್ಯಾಕರೆಗೆ,ಮನ್ರೋನಿಗೆ ಹಾಗೂ ಚಾಪ್ಲಿನ್ನನಿಗೂ ಸಹ ಸಂಧಾನಕ್ಕಾಗಿ ಪತ್ರ ಬರೆದಿದ್ದಾಳೆ.ಆದರೆ ಬ್ರಿಟಷರು ಕಿತ್ತೂರಿನ ಒಡೆತನವನ್ನೇ ಅಪೇಕ್ಷಿಸಿದಾಗ ಚನ್ನಮ್ಮ ಮುಂದಾಲೋಚನೆಯಿಂದ ಕೊಲ್ಲಾಪುರ ಮೊದಲಾದ ನೆರೆಯ ಸಂಸ್ಥಾನಗಳ ಸಹಾಯ ಕೋರಿ ಪತ್ರ ವ್ಯವಹಾರ ಸಹ ಮಾಡಿದ್ದಾಳೆ.೨೧ ಅಕ್ಟೋಬರ ೧೮೨೪ರಂದು ಥ್ಯಾಕರೆ ಕಿತ್ತೂರಿಗೆ ಬಂದನು.ಮೂರನೆಯ ದಿನ ಅಂದರೆ ಅಕ್ಟೋಬರ ೨೩ರಂದು ಕೋಟೆಯ ಮೇಲೆ ತೋಪು ಹಾರಿಸಲು ತನ್ನ ಸೈನ್ಯಕ್ಕೆ ಅಪ್ಪಣೆ ಕೊಟ್ಟ.ಥಟ್ಟನೆ ತೆಗೆದ ಕೋಟೆಯ ಮೇಲೆ ಮುಗಿ ಬಿದ್ದರು ಚನ್ನಮ್ಮ ರಾಣಿಯ ಅಂಗರಕ್ಷಕ ಅಮಟೂರು ಬಾಳಪ್ಪ ಗುಂಡಿಗೆ ಥ್ಯಾಕರೆ ಬಲಿಯಾದ.ಸ್ಟೀವನ್ಸನ್ ಹಾಗೂ ಇಲಿಯಟ್ ಸೆರೆಯಾಳದರು.ದೇಶದ್ರೋಹಿಗಳಾದ ಕುನ್ನೂರು ವೀರಪ್ಪ,ಸರದಾರ ಮಲ್ಲಪ್ಪ ಅವರೂ ಬಲಿಯಾದರು.ಚನ್ನಮ್ಮನಿಗೆ ಹಾಗೂ ಬ್ರಿಟಿಷರಿಗೆ ಮತ್ತೆ ಪತ್ರ ವ್ಯವಹಾರ ನಡೆಯುತ್ತದೆ. ೧೮೨೪ ಡಿಸೆಂಬರ್೨ರಂದು ಸ್ಟೀವನ್ಸನ್ ಹಾಗೂ ಇಲಿಯಟ್ ಇವರ ಬಿಡುಗಡೆಯಾಗಿತ್ತದೆ.ಆದರೆ ಮಾತಿಗೆ ತಪ್ಪಿದ ಬ್ರಿಟಿಷರು ಡಿಸೆಂಬರ್ ೨ರಂದು ಅಪಾರ ಸೈನ್ಯದೊಂದಿಗೆ ಮುತ್ತಿಗೆ ಹಾಕಿ ಕೋಟೆಯನ್ನು ಒಡೆಯಲು ಪ್ರಾರಂಭಿಸುತ್ತಾರೆ.ಡಿಸೆಂಬರ್ ೪ರಂದು ಸರದಾರ ಗುರುಸಿದ್ದಪ್ಪ ಸೆರೆಯಾಳಾಗುತ್ತಾನೆ.ಡಿಸೆಂಬರ್ ೫ರಂದು ಚನ್ನಮ್ಮ ತನ್ನ ಸೊಸೆಯರಾದ ವೀರಮ್ಮ ಮತ್ತು ಜಾನಕಿಬಾಯಿಯರ ಜೊತೆಗೆ ಕೈದಿಯಾಗುತ್ತಾಳೆ.ಡಿಸೆಂಬರ್ ೧೨ರಂದು ಚನ್ನಮ್ಮ ಹಾಗೂ ವೀರಮ್ಮರನ್ನುಬೈಲಹೊಂಗಲಕ್ಕೆ ಕರೆದೊಯ್ಯಲಾಗುತ್ತದೆ.ಅಲ್ಲಿ ನಾಲ್ಕು ವರ್ಷಗಳವರೆಗೆ ಸೆರೆಯಾಳಾಗಿ ಉಳಿದ ಚನ್ನಮ್ಮ ೧೮೨೯ ಫೆಬ್ರುವರಿ ೨ರಂದು ನಿಧನ ಹೊಂದುತ್ತಾಳೆ.ರಾಣಿಯ ಸಹಾಯಕ್ಕೆ ನಿಂತ ಅನೇಕ ಕನ್ನಡ ವೀರರು ಹತರಾದರು.ಚನ್ನಮ್ಮನ ಸಮಾಧಿಯು ಕಲ್ಮಠದಲ್ಲಿ ಇದೆ.ಅಲ್ಲಿ ಸ್ವಾಮಿಗಳು ಒಂದು ಸ್ಮಾರಕವನ್ನು ಕಟ್ಟಿರುವರು.ಮತ್ತು ಆಗಿನ ಕಾಲಕ್ಕೆ ಸೊಲ್ಲಾಪುರದ ಸಬ್ ಕಲೆಕ್ಟರ್ ಸರ್ ಥಾಮಸ್ ಮನ್ರೋನ ಅಣ್ಣನ ಮಗನಾದ ಮಿಸ್ಟರ್ ಮನ್ರೋ ಎಂಬುವನು ಈ ಕಾಳಗದಲ್ಲಿ ಹತನಾದನು.

ಸಿಂಧೂರ ಲಕ್ಷಣನ ಸ್ವಾತಂತ್ರ್ಯಕ್ಕೆ ಕೊಟ್ಟ ಕೊಡುಗೆಯೆಂದರೆ (೧೮೯೮-೧೯೨೨) ರವರೆಗೆ ಭಾರತದ ಕ್ರಾತಿಕಾರಿ ಭಾರತೀಯ ಸ್ವಾತಂತ್ರ್ಯ ಹೋರಾಟಗಾರರಾಗಿದ್ದು ಇವರು ಭಾರತದಲ್ಲಿ ಬ್ರಿಟಿಷ್ ವಸಹಾತು ಸರಕಾರಕ್ಕೆ ವಿರುದ್ಧವಾಗಿ ಹಿಂಸಾತ್ಮಕ ಸ್ವಾತಂತ್ರ್ಯ ಚಳುವಳಿಯಲ್ಲಿ ತೊಡಗಿದ್ದರು.ಇವರು ಈಗಿನ ಮಹಾರಾಷ್ಟ್ರದ ಸಾಗ್ಲಿ ಜಿಲ್ಲೆಯ ಜತ್ತ ತಾಲೂಕಿನ ಸಿಂದೂರ ಗ್ರಾಮದಲ್ಲಿ ಲಕ್ಷ್ಮಣನು ಸಾಬ್ಬಣ್ಣ ಮತ್ತು ನರಸವ್ವ ಎಂಬ ದಂಪತಿಗಳಿಗೆ ಜನಿಸಿದನು ಈ ದಂಪತಿಗಳ ಮೊದಲ ಸಾಕು ಮಗನ ಹೆಸರು ರಾಮ ಇದ್ದದುರಿಂದ ನಂತರ ಹುಟ್ಟಿದ ತಮ್ಮ ಸ್ವಂತ ಸಂತಾನಕ್ಕೆ ರಾಮನ ತಮ್ಮ ಲಕ್ಷ್ಮಣ ಎಂದು ಹೆಸರಿಟ್ಟರು. ಲಕ್ಷ್ಮಣನು ಬಾಲ್ಯದಲ್ಲಿಯೇ ಶೌರ್ಯ ಮತ್ತು ಸಾಹಸಕ್ಕೆ ಹೆಸರಾಗಿದ್ದನೆಂದು ಹೇಳಲಾಗುತ್ತದೆ.ತಂದೆಯ ಮರಣಾ ನಂತರ ಲಕ್ಷ್ಮಣನಿಗೆ ಸರಕಾರಿ ವಾಲೀಕಾರಿಕೆಯ ಕೆಲಸ ಒದಗಿ ಬಂದಿತು.ಅವನನ್ನು ಪ್ರತ್ಯಕ್ಷವಾಗಿ ನೋಡಿದವರು ಅವನೊಬ್ಬ ಅಜಾನುಬಾಹು,ಸ್ಪುರದ್ರೂಪಿ ಸುಂದರಕಾಯದವನಾಗಿದ್ದನೆಂದು ಹೇಳಬಹುದು.ಅವನನ್ನು ಮಹಾಭಾರತದ ಭೀಮನಿಗೆ ಹೋಲಿಸಿ ಅವನು ೧೦ ಅಡಿ ಗೋಡೆಯನ್ನು ನೆಗೆಯುವ ಸಾಮರ್ಥ್ಯ ಹೊಂದಿದ್ದನೆಂದು ಬಣ್ಣಿಸುವರು.ಸದಾ ತಲೆಮರೆಸಿಕೊಂಡು ಇರುತ್ತಿದ್ದ ಲಕ್ಷ್ಮಣನಿಗೆ ಪೋಲಿಸರು ಬೆನ್ನತ್ತಿದಾಗ ಓಡುವ ಕುದುರೆಯನ್ನು ಅವನು ಹಿಮ್ಮೆಟ್ಟಿಸಿ ಹತ್ತುತ್ತಿದ್ದನೆಂದು ಹೇಳಲಾಗುತ್ತದೆ.೧೯೨೦ರ ಆಸುಪಾಸಿನಲ್ಲಿ ಭಾರತದಾದ್ಯಂತ ಅಸಹಕಾರ ಚಳುವಳಿ ಆವರಿಸಿದಾಗ ಲಕ್ಷ್ಮಣನು ತನ್ನದೇ ಆದ ರೀತಿಯಲ್ಲಿ ಸ್ವಾತಂತ್ರ್ಯ ಹೋರಾಟದಲ್ಲಿ ತೊಡಗಿದನು.೫ ಜನ ಸಮಾನ ಮನಸ್ಕರನ್ನು ಜೊತೆಗೂಡಿಸಿಕೊಂಡು ಒಂದು ಗುಂಪು ರಚಿಸಿ,ಆಂಗ್ಲ ಸರಕಾರವು ಶೇಖರಿಸಿದ್ದ ತೆರಿಗೆ ಹಣವನ್ನು ಖಜಾನೆಯಿಂದ ಲೂಟಿ ಮಾಡಲು ಪ್ರಾರಂಭಿಸಿದನು.ಲಕ್ಷ್ಮಣನು ಕೇವಲ ಆಂಗ್ಲರ ವಿರುದ್ಧವಷ್ಟೇ ಅಲ್ಲದೇ ನಿರ್ದಯಿ ಶ್ರೀಮಂತರ ಹಣವನ್ನು ತನ್ನ ಸುತ್ತ ಇರುವ ಬಡವರಿಗೆ ಹಂಚಿ ಸಹಾಯ ಮಾಡುತ್ತಿದ್ದನು.ಈ ರೀತಿ ಸಹಾಯ ಪಡೆದ

ಜನರೇ ಲಕ್ಷ್ಮಣನಿಗೆ ಅಡಗುದಾಣ ಮತ್ತು ಊಟದ ವ್ಯವಸ್ಥೆಯನ್ನು ಒದಗಿಸುತ್ತಿದ್ದರು.ಲಕ್ಷ್ಮಣ ನಿಜವಾಗಿಯೂ ಬಡವರ ಬಂಧುವಾಗಿದ್ದನು.ಆದರೆ ಅವನು ಆಂಗ್ಲ ಸರಕಾರಕ್ಕೆ ತಲೆ ನೋವಾಗಿದ್ದ ಕಾರಣ ಸರಕಾರ ಅವನ ವಿರುದ್ಧ ವಾರೆಂಟ್ ಹೊರಡಿಸಿತ್ತು.

ಈಗಿನ ಬಾಗಲಕೋಟೆ ಜಿಲ್ಲೆಯ ಬೀಳಗಿಯ ಹತ್ತಿರದ ತೆಗ್ಗಿಯ ವೆಂಕಪ್ಪಗೌಡರಿಗೂ ಮತ್ತು ಲಕ್ಷ್ಮಣನಿಗೂ ನಿಕಟವಾದ ಗೆಳತನವಿತ್ತು.ಲಕ್ಷ್ಮಣನಿಗೆ ಗೌಡರು ಸಹಾಯ ಮಾಡುವುದನ್ನು ಅರಿತ ಆಂಗ್ಲರು, ಗೌಡರಿಗೆ ಸಂದಿಗ್ಧತೆಯಲ್ಲಿ ಸಿಲುಕಿಸಿ ಲಕ್ಷ್ಮಣನನ್ನು ಸೆರೆ ಹಿಡಿಯುವ ಅಥವಾ ಕೊಲೆಗೈಯ್ಯುವ ಅನಿವಾರ್ಯ ಪರಿಸ್ಥಿಯನ್ನು ನಿರ್ಮಿಸಿದರು.ಲಕ್ಷ್ಮಣನ ಜೊತೆ ಹೋರಾಡಿ ಗೆಲ್ಲುವದು ಅಸಾಧ್ಯವೆಂದು ಅರಿತ ಗೌಡರ ವಾಲೀಕಾರರು,ಅವನನ್ನು ಹತ್ಯೆ ಮಾಡುವ ಸಂಚನ್ನು ರೂಪಿಸಿದರು.೧೯೨೨ರಲ್ಲಿ ಮಣ್ಣೆತ್ತಿನ ಅಮವಾಸ್ಯೆಯ ದಿನ ಲಕ್ಷ್ಮಣ ಮತ್ತು ಅವನ ಸಂಗಡಿಗರಿಗೆ ಔತನ ಬಿನ್ನಹ ನೀಡಿದರು.ಲಕ್ಷ್ಮಣನು ಊಟ ಮಾಡುವಾಗ ಮೊದಲೆ ಮರೆಯಲ್ಲಿ ಅವಿತು ಕೂತಿದ್ದ ಬಂಧುದಾರಿ,ಲಕ್ಷ್ಮಣನ ಮುಂದೆ ಕಂದೀಲಿನ ನಿಶಾನೆ ಮಾಡಿದ ತಕ್ಷಣ ಗುಂಡು ಹಾರಿಸಿದನು.ಮೋಸದಿಂದ ಗುಂಡು ತಾಗಿದುದರಿಂದ ವೀರ ಸಿಂಧೂರ ಲಕ್ಷ್ಮಣ ಹತನಾದನು.ತನ್ನ ತರುಣ ವಯಸ್ಸಿನಲ್ಲಿಯೇ ಹುತಾತ್ಮನಾದ ಲಕ್ಷ್ಮಣ ಜನರ ಮನದಲ್ಲಿ ಅಮರನಾದನು.ಸಿಂಧೂರ ಲಕ್ಷ್ಮಣನನ್ನು ಕರ್ನಾಟಕ ಮತ್ತು ಮಹಾರಾಷ್ಟ್ರದಲ್ಲಿ ಈಗಲೂ ಕೂಡಾ ಒಬ್ಬ ಜನಪ್ರಿಯ ನಾಯಕನಂತೆ ನೆನೆಯುತ್ತಾರೆ.ಸಿಂಧೂರ ಲಕ್ಷ್ಮಣನ ಕುರಿತು ನಾಟಕ ತುಂಬಾ ಪ್ರಚಲಿತದಲ್ಲಿದ್ದು ೧೯೭೭ರಲ್ಲಿ"ವೀರ ಸಿಂಧೂರ ಲಕ್ಷ್ಮಣ " ಎನ್ನುವ ಕನ್ನಡ ಚಲನಚಿತ್ರ ಕೂಡ ನಿರ್ಮಿಸಲಾಯಿತು.

ಊಟ ಬಡಿಸಿಉಣಿಸಿ। ಎಲ್ಲಾ ಮಂದಿ ಕಳುವ್ಯಾನು।
ನಾಯಕ ಅಲ್ಲೊಬ್ಬ ಉಳಿದ।ಲಾಟೀನ ತಗದ ಲಕ್ಷ್ಮಣನ ಕರದು।
ಕೈಯಾಗ ಕೊಟ್ಟಾನು। ಮೊದಲ ಸೂಚನೆ ಇತ್ತು।
ವಾಲಿಕಾರ ಸ್ವಾಮಣ್ಣ ಹೊಡೆದನು। ಪಕ್ಕೆಯಾಗ ಗುಂಡಾ ಬಡಿತಲ್ಲಾ।
ಆತು ಒಳ್ಳೇ ಕೇಡಾ। ನಾಯಕ ಓಡಿ ಹೋದಾ।
ಲಕ್ಷ್ಮಣ ಬಿದ್ದಾನು।
ಮೋಸ ಮಾಡಿ ಹೊಡದಂಗಾಯ್ತು।
ಅಭಿಮನ್ಯುವಿಗೆ ಕೌರವನು। ॥೧॥

ಈ ಮೇಲಿನ ಲಾವಣಿಗಳಲ್ಲಿ ಹೇಳುವಂತೆ ಲಕ್ಷ್ಮಣನನ್ನು ಕುರಿ ಕೋಳಿ ಸೆರೆ ಕೊಟ್ಟು ಊಟ ಮಾಡಿಸಿ ಮೋಸದಿಂದ ಹೊಡೆದು ಗುಂಡಿಕ್ಕಿ ಕೊಲೆ ಮಾಡುತ್ತಾರೆ.ಅಗ ಲಕ್ಷ್ಮಣ ಸ್ವಾತಂತ್ರ್ಯಕ್ಕಾಗಿ ವೀರಮರಣವನ್ನಪ್ಪುತ್ತಾನೆ.ನಂತರ ಪೋಲಿಸರು ಮರುದಿನ ಬಂದು ಶವವನ್ನು ಬೀಳಗಿಗೆ ತೆಗೆದುಕೊಂಡು ಹೋಗಿ ಅಂತ್ಯಕ್ರಿಯೆ ಮಾಡುತ್ತಾರೆ.ಅಲ್ಲಿ ಸರಕಾರಿ ಸಾಹೇಬರು ಹಾಲು ಕುಡಿದು ಸಂತೋಷಗೊಳ್ಳುತ್ತಾರೆ.ಇದೊಂದು ದುಖ:ಕರ ಸಂಗತಿಯಾಗಿದೆ.ಮತ್ತು ಕೇವಲ ಹುಟ್ಟಿ ೨೪ ವರ್ಷ ವಯಸ್ಸಿನಲ್ಲೇ ಸ್ವಾತಂತ್ರ್ಯ ಹೋರಾಟ ಮಾಡಿ ಭಾರತಕ್ಕೆ ಕೊಡುಗೆಯನ್ನು ಕೊಟ್ಟ ಮಹಾನ್ ಚೇತನ ಶಕ್ತಿಯೆಂದರೆ ಅದು ಸಿಂಧೂರ ಲಕ್ಷ್ಮನನಾಗಿದ್ದಾನೆ.

ಬಿಡುಗಡೆ ಬಂತೆ ಈ ದೇಶಕ್ಕೇ ಬಿಡುಗಡೆಡಯ ಕೆಚ್ಚು
ನೂರಕ್ಕೆ ಐದರಷ್ಟಾದರೂ ಇದೆಯೆ ನಮ್ಮಲ್ಲಿ
ನಮಗೂ ಅಂತರಾಷ್ಟ್ರೀಯ ರೋಗ.ಇದರ ಲಕ್ಷ್ಮಣ-ಇಲ್ಲಿನದು ಏನೂದಕ್ಕುವುದಿಲ್ಲ
ನಮ್ಮ ಹೆಂಗಸರನ್ನು ಸೌಂದರ್ಯ ಸ್ಪರ್ಧೆಗೆ
ಕಳಿಸಿ,ನ್ಯೂಯಾರ್ಕಿನಲ್ಲಿ ನ್ಯಾಯ ಮೂರ್ತಿಗಳೆದರು
ಅರಬತ್ತಲೆಯಲ್ಲಿ ನಿಲ್ಲಿಸಲು ಹಿಂಜರಿವ
ಆನರಲ್ಲ ನಾವು,ಶುದ್ಧ ಗುಲಾಮರು.
[ಗುಲಾಮರು ಲಾವಣಿಯಿಂದ-ಜಿ.ಎಸ್.ಶಿವರುದ್ರಪ್ಪ]

ಅಶೋಕ ಚಕ್ರದ ಅರ್ಥಗರ್ಭಿತ ಸಂದೇಶ-ಸಿಂಹ ಹೃದಯಿಗಳಿಗೆ ಸಿಂಹದ ರಾಷ್ಟ್ರಮುದ್ರೆ ಭಾರತದ ರಾಷ್ಟ್ರಧ್ವಜ ಮತ್ತು ರಾಷ್ಟ್ರಮುದ್ರೆಯ ಸ್ವರೂಪವನ್ನು ಸಾಮ್ರಾಟ್ ಅಶೋಕನ ಕಾಲದ ಸಾಂಚಿ ಸ್ತೂಪದಿಂದ ಸ್ಫೂರ್ತಿವಯನ್ನು ಪಡೆದಿದೆ.ರಾಷ್ಟ್ರಧ್ವಜದ ಕೇಸರಿ ಬಿಳಿ ಹಸುರು ಬಣ್ಣದ ಪಟ್ಟಗಳು ಈಗಿನ ತ್ರಿವರ್ಣ ಧ್ವಜದಲ್ಲಿ ಇದ್ದಂತೆಯೇ ಉಳಿದು ಅದರ ಮೇಲೆ ರಾಟೆಯ ಬದಲು ಸಾಂಚಿ ಸ್ತೂಪದ ಮೇಲೆ ಅಂದವಾಗಿ ಕೆತ್ತಲ್ಪಟ್ಟ ಚಕ್ರವು ದಟ್ಟ ನೀಲಿ ಬಣ್ಣದಲ್ಲಿ ಕಂಗೋಳಿಸುವುದು ಒಂದೇ ರೂಪದಲ್ಲಿ ಕಾಣುವುದಿಲ್ಲವೆಂದು ಈ ಬದಲಾವಣೆ ಮಾಡಲಾಗಿದೆ.ಇದಕ್ಕೆ ಉದಾಹರಣೆಯಾಗಿ ಕಯ್ಯಾರಕಿಞ್ಞಣ್ಣರೈರವರ ಪದ್ಯ ಈ ಕೆಳಗಿನಂತೆ ಇದೆ.

ಕೇಸರಿ ಬಿಳಿ ಹಸುರು ಮೂರು
ಬಣ್ಣ ನಡುವೆ ಚಕ್ರವು
ಸತ್ಯಶಾಂತಿ ತ್ಯಾಗ ಮೂರ್ತಿ
ಗಾಂಧಿ ಹಿಡಿದ ಚರಕವು

ಚಕ್ರವೆಂದರೆ ಯಾಂತ್ರಿಕ ಮತ್ತು ಔದ್ಯೋಗಿಕ ಅಭಿವೃದ್ಧಿ ಎಂದು ಆಧುನಿಕ ಸಂಕೇತ.ಇದು ಮನುಷ್ಯನ ಕಾಲ ಮತ್ತು ಅಂತರಂಗಗಳನ್ನು ಜಯಿಸಲು ಎಂಜಿನ್,ಮೋಟಾರ್,ವಿಮಾನಗಳನ್ನು ಕಂಡು ಹಿಡಿದ ಸಾಹಸದ ದ್ಯೋತಕವಾಗಿದೆ.ಚಕ್ರದ ಈ ಸರ್ವ ಸಂಕೇತಗಳನ್ನು ಗಮನಿಸಿದರೆ ರಾಷ್ಟ್ರದಲ್ಲಿ ಚಕ್ರವಿರಬೇಕು ಎಂದು ಸೂಚಿಸಿದರ ಬುದ್ಧಿ ಮತ್ತೆಯನ್ನು ಕಂಡುಹಿಡಿಯಲಾಗದು.ಈ ಚಕ್ರದ ಹಲ್ಲುಗಳು ಆಕಾರದಲ್ಲಿ ಸೂರ್ಯನನ್ನು, ಆಯುರಾರೋಗ್ಯ, ಬೆಳೆ,ಬೆಳಕು ಮತ್ತು ಸರ್ವಸದ್ವಸ್ತುಗಳ ಪ್ರಧಾನವೆಂದು ಶತಶತಮಾನಗಳಿಂದಲೂ ಆರಾಧಿಸಲಾಗುತ್ತದೆ.ಇದಕ್ಕಿಂತ ಉತ್ತಮವಾದ ಚಿಹ್ನೆಯು ಯಾವ ರಾಷ್ಟ್ರ ಧ್ವಜದಲ್ಲಿಯೂ ಇಲ್ಲವೆಂದು ಹೇಳಬಹುದು.ಭಾರತೀಯರು ಈ ಧ್ವಜದ ಮಹತ್ವವನ್ನರಿತು ಅವರ ಗೌರವಕ್ಕೆ ತಕ್ಕಂತೆ ಬಾಳಬೇಕು.ನಮ್ಮ ಈ ಕೃತಿಗಳಿಂದಲೇ ನಾವು ನಮ್ಮ ರಾಷ್ಟ್ರಧ್ವಜವನ್ನು ಇಡೀ ಜಗತ್ತು ಗೌರವಿಸುವಂತೆ ಮಾಡಬೇಕು.

**ಗ್ರಂಥ ಋಣ**


೧. ಕನ್ನಡ ಸಾಹಿತ್ಯ ಸಂಸ್ಕೃತಿ ಕೋಶ-ಸಂ.ಡಾ.ಚೆ.ಸಿ.ನಿಂಗಣ್ಣ
೨. ಅಂತರ್‌ಜಾಲದ ಮಾಹಿತಿ
೩. ಸಾಹಿತ್ಯದ ಸವಿ -೨-ಚನ್ನಮ್ಮ ರಾಣಿಯ ಕೊನೆಯ ಕಾಳಗ
೪. ಸಾಹಿತ್ಯ-ಕಯ್ಯಾರಕಿಞ್ಞಣ್ಣರೈ
೫. ೫ ಸಾಧ್ವಿ ಸ್ವಾತಂತ್ರ್ಯ-ದಿನದ ಸಂಚಿಕೆ – ಗುರುವಾರ,೧೪/೦೮/೧೯೪೭


**ಪರಾಮರ್ಶನ**


೧. ವೀರ ಮಹಿಳೆ ಕಿತ್ತೂರು ಚನ್ನಮ್ಮ-ಸಂಪದ ಲೇಖನ
೨. ನಮ್ಮ ನಾಡು,ನಮ್ಮ ಹೆಮ್ಮೆಯ ವೀರ ಮಹಿಳೆಯರು
೩. ಸ್ವಾತಂತ್ರ್ಯದ ಕಿಡಿ ಹೊತ್ತಿಸಿದ ಕನ್ನಡದ ರಾಣಿ ಕಿತ್ತೂರು ಚನ್ನಮ್ಮ
೪. ಕೋಮು ಸೌಹಾರ್ದತೆ ಮೆರೆದ ಕಿತ್ತೂರು ಚನ್ನಮ್ಮ

೫. ಕಿತ್ತೂರು ಚನ್ನಮ್ಮ

**ಅಡಿ ಟಿಪ್ಪಣಿ**

೧. ಲಾವಣಿ ಪದಗಳು– ಪು.ಸಂ–೫೫೮

೨. ಜನಪದ ನೆಲೆ ನಿಲವು–ಪು.ಸಂ–೯೫,೯೬

೩. ಗುಲಾಮರು – ಆಶಯ –ಜಿ.ಎಸ್.ಶಿವರುದ್ರಪ್ಪ. ೩ನೇ ಪದ್ಯ,ಪು.ಸಂ–೮೭